1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.
ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 01 |
| ಸಿ.ಡಬ್ಲ್ಯೂ: | 01 |
| ಪ್ರ.ಬೋ.ದಿನಾಂಕ: | 11-11-2021 |

| | | |
|---|---|---|
| ಹೆಸರು ಶ್ರೀ | :: | ಶ್ರೀನಿವಾಸ |
| ತಂದೆಯ ಹೆಸರು | :: | ಕೆ ಎಲ್ ಸಿದ್ದಪ್ಪ |
| ವಯಸ್ಸು | :: | 51 ವರ್ಷ |
| ಉದ್ಯೋಗ | :: | ವ್ಯಾಪಾರ |
| ವಾಸ | :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-8 ನನ್ನ ಅತ್ತೆ. ಚಾಸಾ-12 ನನ್ನ ಮಗಳು. ಚಾಸಾ-17 ನನ್ನ ಹೆಂಡತಿಯ ಅಕ್ಕ. ನನಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಎಸ್ ಎಸ್ ಭಾವನಾ ಮತ್ತು ಮೃತೆ ಅನುಷ್ಕಾ. ಮೃತೆ ವಸಂತ ನನ್ನ ಹೆಂಡತಿ.

2. ಮೊದಲು ನನ್ನ ಮನೆ ದಾವಣಗೆರೆಯ 1 ನೇ ಮೇನ್, 6 ನೇ ಕ್ರಾಸ್, ವಿನೋಬನಗರದಲ್ಲಿದೆ. ನೆಲಮಹಡಿಯಲ್ಲಿ ನನ್ನ ಅಣ್ಣ ವಾಸಮಾಡುತ್ತಿದ್ದ. ಮೊದಲನೇ ಮಹಡಿಯಲ್ಲಿ ನಾನು, ನನ್ನ ಕುಟುಂಬದವರು ವಾಸಮಾಡಿಕೊಂಡಿದ್ದೇವು. ನಮ್ಮ ಮನೆಯ ಪಕ್ಕದಲ್ಲಿ ಇರುವ ನನ್ನ ಮತ್ತೊಂದು ಮನೆ ಖಾಲಿ ಇತ್ತು. ಸದರಿ ಮನೆಯನ್ನು ಆರೋಪಿಗೆ ಬಾಡಿಗೆಗೆ ಕೊಟ್ಟಿದ್ದೆ. 2017 ರಲ್ಲಿ ಆರೋಪಿ ಆ ರೀತಿ ಸದರಿ ಮನೆಯಲ್ಲಿ ಬಾಡಿಗೆಗೆ ಇದ್ದ. ಆ ಸಮಯದಲ್ಲಿ ನನ್ನ ಅಣ್ಣನ ಹೆಂಡತಿಗೆ ಕ್ಯಾನ್ಸರ್ ಆಗಿತ್ತು. ನಾನು ಬುಕ್ ಸ್ಟಾಲ್ ಇಟ್ಟಿದ್ದರಿಂದ ಸಾಮಾನ್ಯವಾಗಿ ಬೆಳಿಗ್ಗೆ 8.00 ಕ್ಕೆ ಮನೆ ಬಿಡುತ್ತಿದ್ದೆ. ನನ್ನ ಮನೆಯಲ್ಲಿ ನನ್ನ ಹೆಂಡತಿ ಮತ್ತು ನನ್ನ ಎರಡು ಮಕ್ಕಳು ಇರುತ್ತಿದ್ದರು. ನನ್ನ ಎರಡು ಮಕ್ಕಳು ಆಗ ಶಾಲೆಗೆ ಹೋಗುತ್ತಿದ್ದರು.

3. ನನ್ನ ಹೆಂಡತಿ ಮತ್ತು ಮಕ್ಕಳು, ಆರೋಪಿ ರಾಕೇಶ ಬಂದು ದುಡ್ಡು ಕೊಡಿ, ಬಂಗಾರ ಕೊಡಿ ಎಂದು ಪೀಡಿಸುತ್ತಾನೆಂದು ನನಗೆ ಹೇಳಿದ್ದರು. ಈ ಬಗ್ಗೆ ನಾನು ಕರೆದು ಬುದ್ದಿವಾದ ಹೇಳಿದ್ದೆ. ನಾನು ಆ ರೀತಿ ಬುದ್ದಿ ಹೇಳಿದ್ದಕ್ಕೆ ಆರೋಪಿ ನನಗೆ ಬೆದರಿಕೆ ಹಾಕಿದ್ದ. ಆ ರೀತಿ ಬೆದರಿಕೆ ಹಾಕಿದ್ದರಿಂದ ನಾನು ನಮ್ಮ ಮನೆಯನ್ನು ಖಾಲಿ ಮಾಡಿಕೊಂಡು ಕುವೆಂಪು ನಗರದಲ್ಲಿ ಮನೆ ಮಾಡಿಕೊಂಡು ವಾಸಮಾಡುತ್ತಿದ್ದೆ. ನಾವು ಅಲ್ಲಿ ವಾಸಮಾಡುತ್ತಿದ್ದಾಗಲೂ ಸಹ ಆರೋಪಿ ನಮ್ಮ ಮನೆಯ ಬಳಿ ಬಂದು ದುಡ್ಡು ಕೊಡಿ, ಬಂಗಾರ ಕೊಡಿ ಎಂದು ತೊಂದರೆ ಕೊಡುತ್ತಿದ್ದ.

4. ದಿ: 20.12.2018 ರಂದು ಬೆಳಿಗ್ಗೆ ನಾನು ನನ್ನ ಬುಕ್ ಸ್ಟಾಲ್ ಗೆ ಹೋಗಿದ್ದಾಗ, ಆ ಸಮಯದಲ್ಲಿ ನನ್ನ ಹೆಂಡತಿ ಮತ್ತು ನನ್ನ ಕಿರಿಯ ಮಗಳಾದ ಅನುಷ್ಕಾ ಮನೆಯಲ್ಲಿದ್ದರು. ಆ ಸಮಯದಲ್ಲಿ ನನ್ನ ಸದರಿ ಮಗಳಿಗೆ ಆರೋಗ್ಯ ಸರಿ ಇರಲಿಲ್ಲ. ನನ್ನ ಹಿರಿಯ ಮಗಳು ಶಾಲೆಗೆ ಹೋಗಿದ್ದಳು. ಆ ದಿನ ಸಂಜೆ 5.00 ರಿಂದ 5.15 ಸಮಯದಲ್ಲಿ ನನ್ನ ಹಿರಿಯ ಮಗಳು ಎಸ್ ಎಸ್ ಭಾವನಾ ಕರೆ ಮಾಡಿ, ಅಮ್ಮ ಬಾಗಿಲು ತೆಗೆಯುತ್ತಿಲ್ಲ ಬನ್ನಿ

ಎಂದು ಕರೆದಳು. ಆಗ ಕೂಡಲೇ ಮನೆಯ ಬಳಿ ಬಂದೆ. ಅಷ್ಟರಲ್ಲಿ ನನ್ನ ಹೆಂಡತಿಯ ಅಕ್ಕ ಉಷಾ ಮತ್ತು ನನ್ನ ಹೆಂಡತಿಯ ತಾಯಿ ರೇಣುಕಮ್ಮ ಅಲ್ಲಿಗೆ ಬಂದಿದ್ದರು. ನಾವುಗಳೆಲ್ಲಾ ಸೇರಿಕೊಂಡು ಬಾಗಿಲು ತೆಗೆದೇವು. ಆದರೆ ಯಾವುದೇ ಪ್ರತಿಕ್ರಿಯ ಮನೆಯ ಒಳಗಿನಿಂದ ಬರಲಿಲ್ಲ. ನಂತರ ನಾವು ಬಾಗಿಲ ಪಕ್ಕದಲ್ಲಿದ್ದ ಗ್ಲಾಸ್ ನ ಕಿಟಕಿಯನ್ನು ಹೊಡೆದೆ. ಹೊಡೆದ ಗ್ಲಾಸ್ ನ ಕಿಟಕಿಯ ಮೂಲಕ ಒಳ ಭಾಗದ ಬೋಲ್ಟ್ ನ್ನು ನಾನು ತೆಗೆದೆ. ನಾವುಗಳೆಲ್ಲಾ ಮನೆಯ ಒಳಗಡೆ ಹೋದಾಗ ಮನೆಯ ಮಧ್ಯಭಾಗದ ಫ್ಯಾನ್ ಗೆ ನನ್ನ ಹೆಂಡತಿ ಮತ್ತು ಮಗಳು ನೇಣು ಹಾಕಿಕೊಂಡಿದ್ದರು. ಆರೋಪಿ ಕೊಡುತ್ತಿದ್ದ ಹಿಂಸೆಯಿಂದ ನನ್ನ ಹೆಂಡತಿ ಮತ್ತು ಮಗಳು ನೇಣು ಹಾಕಿಕೊಂಡಿದ್ದರು.

5. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿದ್ದೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ಸಿದ್ದೇಶ ಎನ್ನುವವರ ಕಡೆಯಿಂದ ಹೇಳಿ ಬರೆಸಿದ್ದೇನೆ.

6. ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ನೇಣು ಸ್ಥಿತಿಯಲ್ಲಿದ್ದ ಶವಗಳನ್ನು ಬಿಚ್ಚಿ ಪೋಟೋಗಳನ್ನು ತೆಗೆದುಕೊಂಡಿದ್ದಾರೆ. ಆ ಸಮಯದಲ್ಲಿ ನಾನು, ನನ್ನ ಸಂಬಂಧಿಕರು ಹಾಗೂ ಇಬ್ಬರು ಬೇರೆಯವರು ಸಹ ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿ, ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ ಸೀರೆಗಳನ್ನು ಜಪ್ತಿ ಮಾಡಿದ್ದಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ.

7. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿ<u>**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**</u> ನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-3 ರಿಂದ ನಿಪಿ-18 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಜಪ್ತಿ ಮಾಡಿದ ಸೀರೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸೀಲ್ ಆಗಿರುವ ಬಟ್ಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಸಾಕ್ಷಿ 2 ಸೀರೆಗಳನ್ನು ಗುರುತಿಸಿದ್ದು, ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಲಾಯಿತು. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ರಾಕೇಶ ಆಗಿರುತ್ತಾನೆ.

8. ನಂತರ 2 ಶವಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ.

<u>**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**</u>

ಕಾಲಾವಕಾಶವನ್ನು ಕೋರಿದ್ದು, ರೂ.500/- ಖರ್ಚಿನ ಸಮೇತ ನೀಡಲಾಯಿತು.

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)</u>

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.